**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 1141/2015**

**ಪಿರ್ಯಾದಿದಾರರುಃ** ರಾಜ್ಯದ ಪರವಾಗಿ
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿತ/ರುಃ** ಮಧುಸೂದನ್.ಬಿ.ಆರ್ ಬಿನ್ ರಂಗಸ್ವಾಮಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ ಃ 1.** ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 2.** ಪ್ರಾಸಾ.1 ದಿನೇಶ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಚನ್ನರಾಯಪಟ್ಟಣದ ದಿಃ 27.03.2014 ದಿನ ಬೆಂಗಳೂರು ಬಿಟ್ಟು ಉಡುಪಿಗೆ ಹೋಗುತ್ತಿರುವಾಗ ಮಲ್ಲಪ್ಪನಘಟ್ಟದ ಹತ್ತಿರ ರಾತ್ರಿ 12.30 ರ ಸಮಯದಲ್ಲಿ ಹೋಗುತ್ತಿರುವಾಗ ಹಿಂದಿನಿಂದ ಕಾರಿನವರು ಹಾರನ್ ಮಾಡಿಕೊಂಡು ಬಂದರು, ಆಗ ತಾನು ಮುಂದೆ ಹೋಗಿ ಎಂದು ಕೈ ಸನ್ನೆಯಿಂದ ಸಿಗ್ನಲ್ ಕೊಟ್ಟೆ ಆಗ ಕಾರಿನವರು ಕಾರನ್ನು ಬಸ್ಸಿಗೆ ಅಡ್ಡ ಹಾಕಿ ನಿಲ್ಲಿಸಿದರು, ಕಾರಿನಿಂದ ಇಳಿದು ಕಾರಿನಲ್ಲಿದ್ದವರು ರಸ್ತೆಯ ಬದಿಯಲ್ಲಿದ್ದ ಕಲ್ಲನ್ನು ತೆಗೆದುಕೊಂಡು ಬಸ್ಸಿನ ಮುಂಭಾಗದ ಗ್ಲಾಸ್ ಗೆ ಎಸೆದು ಗ್ಲಾಸ್ ಹೊಡೆದರು, ಆಗ ಬಸ್ ಗ್ಲಾಸ್ ಜಖಂಗೊಂಡಿತ್ತು, ತಾನು ಸೈಡ್ ಕೊಟ್ಟಿದ್ದರು ಸೈಡ್ ಕೊಟ್ಟಿದ್ದು ಸರಿಯಾಗಲಿಲ್ಲ ಎಂದು ಆರೋಪಿ ಬಸ್ ಗ್ಲಾಸ್ ಗೆ ಕಲ್ಲು ಹಾಕಿದ್ದಾರೆ, ಇದರಿಂದಾಗಿ 25,000/ ನಷ್ಟ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 3.** ಪ್ರಾಸಾ.2 ಐವನ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 27.03.2014 ರಂದು ಬೆಂಗಳೂರು ಬಿಟ್ಟು ಉಡುಪಿಗೆ ಹೋಗುತ್ತಿರುವಾಗ ಮಲ್ಲಪ್ಪನಘಟ್ಟದ ಹತ್ತಿರ ರಾತ್ರಿ 12.30 ರ ಸಮಯದಲ್ಲಿ ಹೋಗುತ್ತಿರುವಾಗ ಹಿಂದಿನಿಂದ

ಕಾರಿನವರು ಹಾರನ್ ಮಾಡಿಕೊಂಡು ಬಂದರು, ಆಗ ಚಾಸಾ.1 ರವರು ಮುಂದೆ ಹೋಗಿ ಎಂದು ಕೈ ಸನ್ನೆಯಿಂದ ಸಿಗ್ನಲ್ ಕೊಟ್ಟರು ಆಗ ಕಾರಿನವರು ಕಾರನ್ನು ಬಸ್ಸಿಗೆ ಅಡ್ಡ ಹಾಕಿ ನಿಲ್ಲಿಸಿದರು, ಕಾರಿನಿಂದ ಇಳಿದು ಕಾರಿನಲ್ಲಿದ್ದವರು ರಸ್ತೆಯ ಬದಿಯಲ್ಲಿದ್ದ ಕಲ್ಲನ್ನು ತೆಗೆದುಕೊಂಡು ಬಸ್ಸಿನ ಮುಂಭಾಗದ ಗ್ಲಾಸ್ ಗೆ ಎಸೆದು ಗ್ಲಾಸ್ ಹೊಡೆದರು, ಆಗ ಬಸ್ ಗ್ಲಾಸ್ ಜಖಂಗೊಂಡಿತ್ತು, ಚಾಸಾ.1 ರವರು ಸೈಡ್ ಕೊಟ್ಟಿದ್ದರು ಸೈಡ್ ಕೊಟ್ಟಿದ್ದು ಸರಿಯಾಗಲಿಲ್ಲ ಎಂದು ಆರೋಪಿ ಬಸ್ ಗ್ಲಾಸ್ ಗೆ ಕಲ್ಲು ಹಾಕಿದ್ದಾರೆ, ಇದರಿಂದಾಗಿ 25,000/ ನಷ್ಟ ಆಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

**ಆರೋಪಿಯ ಉತ್ತರ :**

**ಪ್ರಶ್ನೆ :4.** ಪ್ರಾಸಾ.3 ಹರೀಶ್ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 27.03.2014 ರಾತ್ರಿ ಬೆಂಗಳೂರು ಬಿಟ್ಟು ಉಡುಪಿಗೆ ಹೋಗುತ್ತಿರುವಾಗ ಚನ್ನರಾಯಪಟ್ಟಣದಿಂದ ಸ್ವಲ್ಪ ಹಿಂದೆ ಟಾಟಾ ವಿಂಗರ್ ವಾಹನ ಕೆಎ 13 ಎ 8927 ಕಾರು ಬಸ್ಸನ್ನು ಓವರ್ ಟೇಕ್ ಮಾಡಿ ಬಸ್ಸಿಗೆ ಅಡ್ಡ ನಿಲ್ಲಿಸಿ ಕೆಳಕ್ಕೆ ಇಳಿದು ಕಲ್ಲಿನಿಂದ ಬಸ್ ಗ್ಲಾಸ್ ಗೆ ಹೊಡೆದು ಜಖಂಗೊಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

**ಆರೋಪಿಯ ಉತ್ತರ :**

**ಪ್ರಶ್ನೆ :5.** ಪ್ರಾಸಾ.4 ಸತ್ಯನಾರಾಯಣಶೆಟ್ಟಿ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 27.03.2014 ರಂದು ರಾತ್ರಿ 12 00 ರಿಂದ 12 30 ಗಂಟೆ ಸಮಯಕ್ಕೆ ಬಸ್ ಮಲ್ಲಪ್ಪನಘಟ್ಟಕ್ಕೆ ಬಂದಾಗ ಟೂರಿಸ್ಟ್ ವಿಂಗರ್ ಕಾರು ಬಸ್ಸನ್ನು ಓವರ್ ಟೇಕ್ ಮಾಡಿ, ಬಸ್ ಗೆ ಅಡ್ಡ ನಿಲ್ಲಿಸಿ ಬಸ್ ನಿಲ್ಲಿಸಿದರು, ಅದರಲ್ಲಿದ್ದವರು ಕೆಳಗೆ ಳಿದು ಬಸ್ಸಿನ ಗ್ಲಾಸ್ ಗೆ ಕಲ್ಲು ಹೊಡೆದರು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

**ಆರೋಪಿಯ ಉತ್ತರ :**

**ಪ್ರಶ್ನೆ :6.** ಪ್ರಾಸಾ.9 ರಾಜೇಗೌಡ, ಪ್ರಾಸಾ.11 **ಸಿದ್ದೇಗೌಡ, ಪ್ರಾಸಾ.12 ಜಗದೀಶ್.ಕೆ ಹಾಗೂ** ಪ್ರಾಸಾ.13 ರಾಜು.ಎಂ.ಎಸ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದಲ್ಲಿ ತನಿಖೆಯನ್ನು ಕೈಗೊಂಡು ಆರೋಪಿಯ ವಿರುದ್ದ ದೋಷಾರೋಪಣಾ

ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ :7 :** ನೀವು ಏನಾದರೂ ಹೇಳಲು ಬಯಸುತ್ತೀರಾ ?

**ಆರೋಪಿಯ ಉತ್ತರ :**

**ಪ್ರಶ್ನೆ : 8 :** ನಿಮ್ಮ ಪ್ರತಿರಕ್ಷಣೆಗೆ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

**ಆರೋಪಿಯ ಉತ್ತರ :**

(ಮೇಲೆ ತಿಳಿಸಿದ ಎಲ್ಲಾ ವಿವರಗಳನ್ನು ಓದಿ, ಹೇಳಿ, ಕೇಳಲಾಗಿ ಆತನು ನೀಡಿದ ಉತ್ತರಗಳನ್ನು ಸ್ವತಃ ನನ್ನ ಕೈ ಬರಹದಲ್ಲಿ ಬರೆದು ದೃಢೀಕರಿಸಿರುತ್ತೇನೆ.)

ದಿನಾಂಕಃ **29.04.2026**

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.